**ಓ.ಎಸ್.ನಂಬ್ರ:107/2023** **ಪಿ.ಡಬ್ಲ್ಯೂ :1**

ದಿನಾಂಕಃ 18-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ ಹೆಚ್.ಎನ್.ಪಿ. ವಕೀಲರಿಂದ**

ತಾಯಿಯ ಪಾಲನ್ನು ಕೇಳಿ ದಾವೆ ಹೂಡಿರುತ್ತೇನೆ. ದಾವಾ ಆಸ್ತಿ ಮೂಲತಃ ಸುಬ್ಬಿಯವರದ್ದು. ಸುಬ್ಬಿಯವರ ತಾಯಿಗೆ ಅವರೊಬ್ಬರೇ ಮಗಳು. ಸುಬ್ಬಿಗೆ ನಾಲ್ಕು ಹೆಣ್ಣು, ಎರಡು ಗಂಡು ಮಕ್ಕಳು. ಅವರ ಹೆಸರು ಮಂಗಳು, ಮಾಸ್ತಿ, ಗುರುವಮ್ಮ, ಗೋವಿಂದ, ಸೋಮು, ರಂಗ. ಮಂಗಳುರವರಿಗೆ ಮದುವೆಯಾಗಿರುತ್ತದೆ, ಮಕ್ಕಳು ಇರುವುದಿಲ್ಲ. ಮಾಸ್ತಿಯವರಿಗೆ ಮಕ್ಕಳು ಇದ್ದಾರೆ. ಮಾಸ್ತಿಯವರ ಮಕ್ಕಳ ಹೆಸರು ಗೊತ್ತಿಲ್ಲ. ಈಗ ಕಾವೇರಿ ಮತ್ತು ಪರಮುರವರು ಜೀವಂತ ಇದ್ದಾರೆ. ಮಾಸ್ತಿಯವರಿಗೆ 6 ಗಂಡು ಮಕ್ಕಳು ಮತ್ತು 3 ಹೆಣ್ಣು ಮಕ್ಕಳು. ಮಾಸ್ತಿಯವರು ಈಗ ಜೀವಂತ ಇಲ್ಲ. ಮಾಸ್ತಿಯವರ ಮಕ್ಕಳಾದ ಕಾವೇರಿ ಮತ್ತು ಪರಮುರವರನ್ನು ಹೊರತುಪಡಿಸಿ ಬೇರೆಯವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಅವರನ್ನು ಸೇರಿಸದೇ ಇರಲು ವಿಶೇಷ ಕಾರಣ ಇರುವುದಿಲ್ಲ. ನಾಲ್ಕನೇ ಪ್ರತಿವಾದಿ ಈಗ ಜೀವಂತ ಇರುವುದಿಲ್ಲ. ಪರಮುರವರನ್ನು ಈ ದಾವೆಯಲ್ಲಿ ಸೇರಿಸಿದ್ದಾರೋ ಇಲ್ಲವೋ ಎಂದು ಗೊತ್ತಿಲ್ಲ. ಗುರುವಮ್ಮರವರಿಗೆ 4 ಹೆಣ್ಣು ಮಕ್ಕಳು. ಅವರುಗಳೆಂದರೆ ನಾನು, 1 ರಿಂದ 3 ನೇ ಪ್ರತಿವಾದಿಯರು. ನನ್ನನ್ನು ಮತ್ತು ಜಟ್ಟುರವರನ್ನು ಹೊರತುಪಡಿಸಿ ಉಳಿದವರು ತೀರಿ ಹೋಗಿರುತ್ತಾರೆ. ಸೋಮುರವರಿಗೆ ಮದುವೆಯಾಗಿ ಅವರಿಗೆ ಪಾಲು ಸಿಕ್ಕಿರುತ್ತದೆ. ಸೋಮು ರವರಿಗೆ 2 ಗಂಡು, 1 ಹೆಣ್ಣು ಮಗಳು. ಸೋಮುರವರ ಮಕ್ಕಳು ವೆಂಕಟರಮಣ, ರಾಮ ಮತ್ತು ಮರ್ಲಿ. ಗೋವಿಂದು ರವರಿಗೆ ಮದುವೆಯಾಗಿರುತ್ತದೆ, ಆದರೆ ಮಕ್ಕಳು ಇರುವುದಿಲ್ಲ. ರಂಗರವರಿಗೆ 4 ಗಂಡು ಮತ್ತು 1 ಹೆಣ್ಣು ಮಗಳು. ರಂಗರವರ ಮಕ್ಕಳ ಹೆಸರು ಗೊತ್ತಿಲ್ಲ.

2. ಡಿಕ್ಲರೇಶನ್ ಅರ್ಜಿ ಸಲ್ಲಿಸುವ ಮೊದಲು ದಾವಾ ಆಸ್ತಿಯ ಒಡೆಯರು ಕಾರಂತ್. ಗೇಣಿ ಆಸ್ತಿಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಮಂಗಳುರವರು ಭೂ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿರುವ ಅರ್ಜಿ ಮತ್ತು ಆದೇಶವನ್ನು ನಾನು ನೋಡಿರುವುದಿಲ್ಲ. ಆದೇಶದಲ್ಲಿ ಏನು ಹೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಆರ್.ಟಿ.ಸಿ. ಈಗ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇದೆ.

3. ನಾನು ಹರ್ಕೇರಿಯಲ್ಲಿ ವಾಸವಿದ್ದೇನೆ. ಹರ್ಕೇರಿಯಲ್ಲಿ ಇರುವ ಆಸ್ತಿಗೆ ಹಾಗು ನನಗೆ ಯಾವುದೇ ಸಂಬಂಧ ಇಲ್ಲ. ಮಂಗಳುರವರು ಭೂ ನ್ಯಾಯ ಮಂಡಳಿಗೆ ಸ್ವಂತ ನೆಲೆಯಲ್ಲಿ ಅರ್ಜಿ ಸಲ್ಲಿಸಿರುವುದು ಗೊತ್ತಿಲ್ಲ. ಮಂಗಳುರವರು ದಾವಾ ಆಸ್ತಿಯನ್ನು ಒಬ್ಬರೇ ಅನುಭವಿಸಿಕೊಂಡು ಬರುತ್ತಿದ್ದರು. ಅವರ ಜೊತೆ ಅವರ ಅಕ್ಕತಂಗಿಯರು ಇದ್ದರು. ಸುಕ್ರು ಹೆಂಗಸು ನನ್ನ ಚಿಕ್ಕಮ್ಮ. ಅವರು ಈಗ ಜೀವಂತ ಇರುವುದಿಲ್ಲ. ಅವರ ಮಕ್ಕಳನ್ನು ದಾವೆಯಲ್ಲಿ ಸೇರಿಸಿದ್ದೇವೆ.

**ಮುಂದುವರಿದ ವಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**